

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕನ್ನಡದ ಗಡಿಬಾಂದುಗಳ ದಾಟಿ....

**ಕ**ಳೆದ ತಿಂಗಳ ಆರಂಭದಲ್ಲಿ ಹೊಸವರ್ಷದ ಶುಭಾಶಯವನ್ನು ಕೋರಿ ನಮಗೆ ಬಂದ ಅನೇಕ 'ಗ್ರೀಟಿಂಗ್ಸ್' ಗಳಲ್ಲಿ ಈ ಕೆಳಗಿನ ಪತ್ರ ಗಮನಾರ್ಹ. ಗುರುಗಳಾದವರಿಂದ ಆಶೀರ್ವಾದ ಬೇಡಬೇಕೇ ಹೊರತು ಗುರುಗಳಿಗೇ ಶುಭಾಶಯ ಕೋರಿ ಪತ್ರ ಬರೆಯುವುದು ಸರಿಯೇ ಎಂಬ ಪ್ರಶ್ನೆ ಧಾರ್ಮಿಕ ಶ್ರದ್ಧಾಳುಗಳಲ್ಲಿ ಮೂಡಬಹುದು. ಗುರುಗಳೊಡನೆ ಆತ್ಮೀಯ ಒಡನಾಟ ಉಳ್ಳ ವಿಭಿನ್ನ ಸಂಪ್ರದಾಯದವರು ಶುಭಾಶಯ ಕೋರಿ 'ಗ್ರೀಟಿಂಗ್ಸ್' ಕಳುಹಿಸಿದರೆ ತಪ್ಪೇನು ಎಂದು ವಿಚಾರವಂತರು ಮರುಪ್ರಶ್ನೆ ಹಾಕಲೂಬಹುದು. ಅದೇನೆ ಇರಲಿ, ನಮಗೆ ಬಂದ ಶುಭಾಶಯ ಪತ್ರದ ಪೂರ್ಣಪಾಠ ಹೀಗಿದೆ:

> **"ಪರಮಪೂಜ್ಯ ಮಹಾಸ್ವಾಮಿಗಳಿಗೆ ಮುನೀಶನಗರದಿಂದ ನನ್ನ ಹೃತ್ಪೂರ್ವಕ ನಮನಗಳು. ನನ್ನ ಕಡೆಯಿಂದ ಇಷ್ಟು ದಿವಸ ಮೌನ ಇದ್ದರೂ, ಇದು ವಿಸ್ಮರಣ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬೇಡಿ. ಇದು ಸಾಧ್ಯವಿಲ್ಲ! ಎಂಬುದಕ್ಕೆ ಕಿರುಸನ್ನೆಯಾಗಿ ಹೊಸ ವರ್ಷದ ನನ್ನ ಹಾರ್ದಿಕ ಶುಭಾಶಯಗಳನ್ನು ಸ್ವೀಕರಿಸಿರಿ. ಈ ವರ್ಷ (೨೦೦೯) ನಾನು ಇಂಡಿಯಾಕ್ಕೆ ಬರಲಾಗಲಿಲ್ಲ. ಆದರೆ ಪ್ರಾಯಶಃ ಮುಂದಿನ ಮಾರ್ಚ್ ತಿಂಗಳಿನಲ್ಲಿ ಮತ್ತೆ ಬರುವ ಸುಯೋಗ ಸಿಗುತ್ತದೆ. ತಾವೂ, ತಮ್ಮ ಸಂಸ್ಥಾನದ ಸದ್ಧ್ಯುನವರೂ ಮೊದಲಾದ ನಮ್ಮ ಸ್ನೇಹಿತರೂ ಆರೋಗ್ಯದಲ್ಲೂ ಜೀವನತೃಪ್ತಿಯಲ್ಲೂ ಇರುವಿರಿ ಎಂದು ನಂಬುತ್ತೇನೆ. ಇಂತೀ ತಮ್ಮ..."**

ಇದನ್ನು ಅಪ್ಪಟ ಕನ್ನಡದ ಲಿಪಿಯಲ್ಲಿ ಸ್ವಂತ ಕೈಬರವಣಿಗೆಯಲ್ಲಿ ನಮಗೆ ಬರೆದವರು ಕನ್ನಡಿಗರಲ್ಲವೆಂದು ಹೇಳಿದರೆ ನೀವು ಆಶ್ಚರ್ಯಪಡುತ್ತೀರಿ. ಇದರಲ್ಲಿ ಉಲ್ಲೇಖಿತವಾಗಿರುವ 'ಮುನೀಶನಗರ' ನೀವು ಭಾರತದ ಭೂಪಟದಲ್ಲಿ ಹುಡುಕಿದರೆ ಸಿಗುವುದಿಲ್ಲ. ಈ ಪತ್ರ ನಮಗೆ ಬಂದಿರುವುದು ಜರ್ಮನಿಯ ಮ್ಯೂನಿಚ್ ನಗರದಿಂದ. ಬರೆದವರು ಪ್ರೊಫೆಸರ್ ರಾಬರ್ಟ್ ಜೈಡನ್‌ಬೋಸ್ (Robert Zydenbos). ಮೂಲತಃ ಹಾಲೆಂಡ್ ದೇಶದವರಾದ ಇವರು ಈಗ ಮ್ಯೂನಿಚ್ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ನೀಳಕಾಯ, ಎತ್ತರವಾದ ಮೈಕಟ್ಟು, ಕಿವಿಯವರೆಗೂ ಇಳಿಬಿದ್ದ ತಲೆಗೂದಲು. ಭಾರತಕ್ಕೆ ಬಂದಾಗ ಕಚ್ಚೆ ಪಂಚೆ, ಬಿಳಿ ಅಂಗಿ ಅದರ ಮೇಲೆ ಕಪ್ಪು ಬಣ್ಣದ 'ವಾಷ್ ಕೋಟ್' (ಗ್ರಾಮ್ಯ) ಮತ್ತು ಕಾಲಲ್ಲಿ ಸಾದಾ ಚಪ್ಪಲಿ ಧರಿಸುವ ಅವರು ಅಪ್ಪಟ ಕನ್ನಡದಲ್ಲಿ ಮಾತನಾಡುತ್ತಾರೆ. ಅಪ್ಪಿತಪ್ಪಿ ಒಂದೂ ಇಂಗ್ಲೀಷ್ ಪದವನ್ನು ಬಳಸುವುದಿಲ್ಲ. ಅದಕ್ಕಾಗಿ ಅವರು ಬಹಳ ಕಷ್ಟಪಡುವುದಿಲ್ಲ. ಸಹಜವಾಗಿ ಮಾತನಾಡುತ್ತಾರೆ. ಅವರು ಮಾತನಾಡುವ ಶೈಲಿ ಸ್ವಲ್ಪಮಟ್ಟಿಗೆ ದಕ್ಷಿಣ ಕನ್ನಡದವರನ್ನು ಹೋಲುತ್ತದೆ. ಅವರು ಬರೆದ ಮೇಲ್ಕಂಡ ಪತ್ರವನ್ನು ನೀವು ಸರಿಯಾಗಿ ಗಮನಿಸಿದರೆ ಇಸವಿಯನ್ನು ಅವರು ಕನ್ನಡದ ಅಂಕಿಗಳಲ್ಲಿ ಬರೆದಿರುತ್ತಾರೆ. ಎಷ್ಟೋ ಜನ ಕನ್ನಡಿಗರಿಗೆ ಈಗ ಕನ್ನಡ ಅಂಕಿಗಳು ಗೊತ್ತೇ ಇಲ್ಲ. ವಿದೇಶೀಯರಾದರೂ ಕನ್ನಡ ನಾಡು-ನುಡಿಯ ಬಗ್ಗೆ ವಿಶೇಷ ಅಭಿರುಚಿ ಇರುವ ಇವರನ್ನು 'ಅಪ್ಪಟ ಕನ್ನಡಿಗ' ಎನ್ನದೆ ಇನ್ನಾರನ್ನು ಹಾಗೆ ಕರೆಯಲು ಸಾಧ್ಯ!

ಕನ್ನಡ ನಾಡಿನ ಈಗಿನ ವಿದ್ಯಾವಂತ ಯುವಕ ಯುವತಿಯರ ನಾಲಿಗೆಯಲ್ಲಿ ಕನ್ನಡ ಕುಲಗೆಟ್ಟು 'ಕಂಗ್ಲೀಷ್' ಆಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಕನ್ನಡಭಾಷೆ ಆಡುಮಾತಿನಲ್ಲಿ ತನ್ನ ಮೂಲಸತ್ವವನ್ನು ಕಳೆದುಕೊಳ್ಳುತ್ತಿದೆ. ಸಾಹಿತ್ಯವಲಯದಲ್ಲಿ ಗ್ರಾಂಥಿಕ ಭಾಷೆಯಾಗುತ್ತಿದೆ. ಭಾಷೆ ನಿಂತ ನೀರಲ್ಲ; ಚಲನಶೀಲ, ನಿಜ. ಮೂಲನದಿಗೆ ಹಳ್ಳಕೊಳ್ಳಗಳು ಸೇರಿ ತುಂಬಿ ಹರಿದಂತೆ ಕಾಲಾನುಗತಿಯಲ್ಲಿ ಭಾಷೆ ಬೆಳೆಯುತ್ತಾ ಹೋಗುತ್ತದೆ ಎನ್ನುತ್ತಾರೆ. ಆದರೆ ಇಲ್ಲಿರುವ ಮೂಲ ಪ್ರಶ್ನೆ: ಬೆಳವಣಿಗೆಯ ಪರಿಭಾಷೆ ಏನು? ತನ್ನಲ್ಲಿರುವುದನ್ನು ಕಳೆದುಕೊಂಡು ಬೇರೆಯದನ್ನು ಸ್ವೀಕರಿಸುವುದು ಬೆಳವಣಿಗೆಯ ಲಕ್ಷಣವೇ ಅಥವಾ ತನ್ನಲ್ಲಿರುವುದನ್ನು ಉಳಿಸಿಕೊಂಡು ತನ್ನಲ್ಲಿಲ್ಲದಿರುವುದನ್ನು ಸ್ವೀಕರಿಸುವುದು ಬೆಳವಣಿಗೆಯ ಲಕ್ಷಣವೇ? ಹಳ್ಳಕೊಳ್ಳಗಳ ನೀರು ಸೇರಿ ತುಂಬಿ ಹರಿಯುವಾಗ ನದಿ ತನ್ನಲ್ಲಿರುವ ನೀರನ್ನು ಕಳೆದುಕೊಳ್ಳುವುದಿಲ್ಲವೆಂಬುದನ್ನು ಇಲ್ಲಿ ಮನಗಾಣಬೇಕು. ಆದರೆ ಭಾಷೆಯ ವಿಚಾರದಲ್ಲಿ

ಆಗುತ್ತಿರುವುದೇನು? ಸ್ವಂತ ಭಾಷೆಯಲ್ಲಿರುವ ಪದಗಳನ್ನು ಮೂಲೆಗೆ ತಳ್ಳಿ ಬೇರೆ ಭಾಷೆಯ ಪದಗಳನ್ನು ಬಳಸುವುದು. ಉದಾಹರಣೆಗೆ 'ಗಾಳಿ ಸುದ್ದಿ' ಎನ್ನುವುದರ ಬದಲು 'ರೂಮರ್', 'ತಿಂಡಿ' ಎನ್ನುವುದರ ಬದಲು 'ಟಿಫಿನ್', 'ಬಾಗಿಲು' ಎನ್ನುವುದರ ಬದಲು 'ಡೋರ್' ಎನ್ನುವುದು ಇತ್ಯಾದಿ. ಹೀಗೆ ನಮ್ಮಲ್ಲಿರುವ ಅಪ್ಪಟ ಕನ್ನಡ ಪದಗಳನ್ನು ಬಿಟ್ಟು ಇಂಗ್ಲೀಷ್ ಪದಗಳನ್ನು ಬಳಸುವ ಅವಶ್ಯಕತೆ ಇದೆಯೇ? ಇದರಿಂದ ಹೇಗೆ ಭಾಷೆಯ ಬೆಳವಣಿಗೆಯಾಗಲು ಸಾಧ್ಯ? ಯಾವುದೇ ಭಾರತೀಯ ಭಾಷೆ ಆಧುನಿಕ ವಿದ್ಯಾವಂತರಿಂದ ಕುಲಗೆಟ್ಟಂತೆ, ಹಳ್ಳಿಗರಿಂದ ಕೆಟ್ಟಿಲ್ಲ. ಇದಕ್ಕೆ ಕನ್ನಡ ಹೊರತೇನೂ ಅಲ್ಲ. ಇಂದು ಕನ್ನಡ ಭಾಷೆಯ ಸತ್ವ ಉಳಿದಿರುವುದು ಹಳ್ಳಿಯ ಜನರಿಂದ, ಕೆಟ್ಟಿರುವುದು ಪೇಟೆಯವರಿಂದ. ಪೇಟೆಗಳಲ್ಲಿರುವ ಜನರು ವಿಭಿನ್ನ ಭಾಷೆಗಳನ್ನು ಮಾತನಾಡುವ ಜನರ ಸಂಪರ್ಕಕ್ಕೆ ಬರುವುದರಿಂದ ಹೀಗಾಗುತ್ತದೆಯೆಂದು ವಾದಿಸಬಹುದು. ಇದು ನಿಜವಾಗಿದ್ದರೆ ಇಂಗ್ಲೆಂಡಿಗೆ ಹತ್ತಿರದಲ್ಲಿರುವ ಫ್ರೆಂಚ್, ಜರ್ಮನ್, ಇಟಾಲಿಯನ್ ಇತ್ಯಾದಿ ಐರೋಪ್ಯ ಭಾಷೆಗಳು ಎಂದೋ ತಮ್ಮ ಭಾಷೆಯ ಮೂಲ ಸ್ವರೂಪವನ್ನು ಕಳೆದುಕೊಳ್ಳಬೇಕಾಗಿತ್ತು. ಜಗತ್ತಿನ ಎಲ್ಲ ಭಾಷೆಗಳ ಮೇಲೆ ಇಂಗ್ಲೀಷ್ ಭಾಷೆ ತನ್ನ ಪ್ರಭಾವ ಬೀರಿರುವುದು ನಿಜ. ಆದರೆ ಇಂಗ್ಲೀಷಿನಿಂದ ಭಾರತೀಯ ಭಾಷೆಗಳಲ್ಲಿ ಉಂಟಾಗಿರುವಷ್ಟು ಅನಾಹುತ ಅನ್ಯ ಭಾಷೆಗಳಲ್ಲಿ ಅಷ್ಟಾಗಿ ಆಗಿರುವುದಿಲ್ಲ. ಪ್ರಾಚೀನ ಕಾಲದಲ್ಲಿ ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಧಾರಾಳವಾಗಿ ಸೇರ್ಪಡೆಯಾದಂತೆ ಈಗ ಇಂಗ್ಲೀಷ್ ಭಾಷೆಯ ಪದಗಳು ಕನ್ನಡಕ್ಕೆ ಅಷ್ಟೇ ಅಲ್ಲ ಎಲ್ಲಾ ಭಾರತೀಯ ಭಾಷೆಗಳಲ್ಲಿ ಎಗ್ಗಿಲ್ಲದೆ ಸೇರ್ಪಡೆಯಾಗುತ್ತಿವೆ. ಹೀಗಾಗಿ ಕನ್ನಡ 'ಕಂಗ್ಲೀಷ್' ಆದಂತೆ ತಮಿಳು, ತೆಲುಗು, ಮಲೆಯಾಳಂ, ಹಿಂದೀ ಮತ್ತಿತರ ಭಾರತೀಯ ಭಾಷೆಗಳೂ ಸಹ ತಂಗ್ಲೀಷ್, ತೆಂಗ್ಲೀಷ್, ಮಂಗ್ಲೀಷ್, ಹಿಂಗ್ಲೀಷ್ ಭಾಷೆಗಳಾಗಿ ಪರಿವರ್ತನೆಗೊಂಡಿವೆ.

ಇದರ ಮೂಲ ಬೇರುಗಳನ್ನು ಹುಡುಕುತ್ತಾ ಹೋದರೆ ಕನ್ನಡಸಾಹಿತ್ಯದ ಹಿರಿಯ ತಲೆಮಾರಿನ ದಿಗ್ಗಜರಲ್ಲಿ ಒಬ್ಬರಾದ ತೀ.ನಂ.ಶ್ರೀಯವರು ಬರೆದ ಲೇಖನ 'ಕಾಸಿನ ಸಂಘ' ನೆನಪಾಗುತ್ತದೆ. ಆಗಿನ್ನೂ 'ಕಂಗ್ಲೀಷ್' ಪದ ಚಾಲ್ತಿಯಲ್ಲಿರಲಿಲ್ಲ. ಆಗಲೇ ವಿದ್ಯಾವಂತರ ದೈನಂದಿನ ಸಂಭಾಷಣೆ ಕನ್ನಡ ಮತ್ತು ಇಂಗ್ಲೀಷ್‌ಪದಗಳ ಕಲಬೆರಕೆಯಾಗಿತ್ತೆಂದು ತಿಳಿಯುತ್ತದೆ. **"ಇತ್ತ ಕನ್ನಡವಲ್ಲ, ಅತ್ತ ಇಂಗ್ಲೀಷ್ ಅಲ್ಲ. ಅದೊಂದು ಹರುಕುಮುರುಕು ಜಾತಿಯ ಬೆರಕೆನುಡಿ.....ಇಲ್ಲಿ ಕಲೆಯುತ್ತಿದ್ದ ಮಾತುಗಳಲ್ಲಿ ಇಂಗ್ಲೀಷಿನ ಪರಿಮಾಣವೇ ಹೆಚ್ಚು; ಹರುಕು ಬಟ್ಟೆಗೆ ತೇಪೆ ಹಾಕಿದಂತೆ ಅಲ್ಲೊಂದು ಇಲ್ಲೊಂದು ಕನ್ನಡ ಪದ ಅಥವಾ ಪ್ರತ್ಯಯ"** ಎಂದು ತೀ.ನಂ.ಶ್ರೀ ವಿಶ್ಲೇಷಣೆ ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಆಗಿನ ಕಾಲದ ಕನ್ನಡ ಅಧ್ಯಾಪಕರಷ್ಟೇ ಅಲ್ಲ ಕನ್ನಡದ ಹುಚ್ಚು ಇದ್ದ ಇಂಗ್ಲೀಷ್, ಸಂಸ್ಕೃತ, ದರ್ಶನ, ವಿಜ್ಞಾನ ವಿಷಯಗಳ ಯುವ ಅಧ್ಯಾಪಕರು ಸೇರಿ ಕನ್ನಡದಲ್ಲಿ ಮಾತನಾಡುವಾಗ ಇಂಗ್ಲೀಷ್ ಪದಗಳನ್ನು ಬಳಸಬಾರದೆಂದು ಕೆಲವು ನಿಬಂಧನೆಗಳನ್ನು ರೂಪಿಸಿ ಒಂದು 'ಕಾಸಿನ ಸಂಘ'ವನ್ನು ಸ್ಥಾಪಿಸಿಕೊಂಡರಂತೆ. ಈ ಸಂಘಕ್ಕೆ 'ಕಾಸಿನ ಸಂಘ' ಎಂದು ಹೆಸರು ಬರಲು ಕಾರಣ ನಿಯಮಗಳನ್ನು ಉಲ್ಲಂಘಿಸಿ ಯಾರು ಕನ್ನಡದಲ್ಲಿ ಇಂಗ್ಲೀಷ್ ಪದಗಳನ್ನು ಬೆರಸಿ ಮಾತನಾಡುತ್ತಾರೋ ಅಂಥವರು ಬಳಸಿದ ಪ್ರತಿಯೊಂದು ಇಂಗ್ಲೀಷ್ ಪದಕ್ಕೂ ಒಂದು ಕಾಸಿನಂತೆ ದಂಡ ಕೊಡಬೇಕು ಎಂದು ನಿಯಮಾವಳಿಗಳಲ್ಲಿ ಶಿಕ್ಷೆಯ 'ಕಲಂ' (penalty clause) ಸೇರಿಸಿದ್ದರಂತೆ. ದುಬಾರಿ ದಂಡ ತೆತ್ತವರು ಈ ಅಧಿನಿಯಮಕ್ಕೆ ನಂತರ ತಿದ್ದುಪಡಿ ತರಬಯಸಿದರಂತೆ! ಕ್ರಿಕೆಟ್ ಆಟದಲ್ಲಿ ಚೆಂಡನ್ನು ಬೌಂಡರಿ ದಾಟಿ ಎಷ್ಟೇ ದೂರ ಹೊಡೆದರೂ ನಾಲ್ಕೇ 'ರನ್' ಕೊಡುವಂತೆ ಒಂದು ವಾಕ್ಯದಲ್ಲಿ ಎಷ್ಟೇ ಇಂಗ್ಲೀಷ್ ಪದಗಳನ್ನು ಬಳಸಿದರೂ 3 ಕಾಸು ದಂಡ ಕೊಟ್ಟರೆ ಸಾಕೆಂಬ ರಿಯಾಯತಿ ಜಾರಿಗೆ ಬಂತಂತೆ. ಆದರೂ ಸಂಘಕ್ಕೆ ಆದಾಯ ಬರುವುದು ಕಡಿಮೆಯೇನೂ ಆಗಲಿಲ್ಲ ಎಂದು ತೀ.ನಂ.ಶ್ರೀ ಬರೆಯುತ್ತಾರೆ. ಈ 'ಕಾಸಿನ ಸಂಘ' ಬಹಳ ಕಾಲ ಉಳಿಯಲಿಲ್ಲ. ಕಾಫಿ ಕುಡಿಯುವಾಗ ತಲೆಯೆತ್ತಿದ ಈ ಸಂಘ ಕಾಫಿ ಕುಡಿಯುವಾಗಲೇ ವಿಸರ್ಜನೆಗೊಂಡಿತಂತೆ!

ಈ 'ಕಾಸಿನ ಸಂಘ'ವನ್ನು ವಿಸರ್ಜಿಸಬಾರದಿತ್ತು; ಹೀಗೆ ವಿಸರ್ಜಿಸಿದ್ದೇ ಕನ್ನಡಕ್ಕೆ ಮುಳುವಾಯಿತೇನೋ ಎಂದೆನಿಸುತ್ತದೆ. ಈಗಂತೂ ಕಾನ್ವೆಂಟ್ ಸಂಸ್ಕೃತಿ ಮೇರೆ ಮೀರಿ ಬೆಳೆದು ಪೇಟೆಪಟ್ಟಣಗಳಲ್ಲಿ ಗಲ್ಲಿಗಲ್ಲಿಗೆ ನರ್ಸರಿಶಾಲೆಗಳು ಆರಂಭವಾಗಿವೆ. ಇಂಗ್ಲೆಂಡಿನಿಂದ ಕೆಲವೇ ಕಿ.ಮೀ ದೂರದಲ್ಲಿರುವ ಫ್ರಾನ್ಸ್ ಅಥವಾ ಜರ್ಮನಿಯ ಮಕ್ಕಳಿಗೆ ಇಂಗ್ಲೀಷ್ ಬರುವುದಿಲ್ಲ. ಸಾವಿರಾರು ಕಿ.ಮೀ ದೂರದಲ್ಲಿರುವ ಕನ್ನಡ ನಾಡಿನ ಮಕ್ಕಳು ಅರ್ಥ ಗೊತ್ತಿಲ್ಲದಿದ್ದರೂ ಅರಳು ಹುರಿದಂತೆ ಇಂಗ್ಲೀಷಿನಲ್ಲಿ 'nursery rymes' ಗಳನ್ನು ಹೇಳುತ್ತಾರೆ; ಕನ್ನಡವೇ ಸರಿಯಾಗಿ ಬರುವುದಿಲ್ಲ. ಇದಕ್ಕೆ ಕಾರಣ ಪೋಷಕರಿಗೆ ಇಂಗ್ಲೀಷ್ ಮೇಲಿರುವ ವ್ಯಾಮೋಹ. ಬಹಳ ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಬಂದ ವರದಿಯನ್ನು ಓದಿದ ನೆನಪು. ಒಬ್ಬ ತಾಯಿ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಕಾನ್ವೆಂಟ್ ಶಾಲೆಗೆ ತನ್ನ ಮಗುವನ್ನು ಸೇರಿಸಿದ್ದಳು. ಹದಿನೈದು ದಿನಗಳ ಮೇಲಾದರೂ ಶಾಲೆಯಿಂದ ವಾಪಾಸ್ ಮನೆಗೆ ಬಂದಾಗ ಆ ಮಗು ತನ್ನ ತಾಯಿಯನ್ನು 'ಅಮ್ಮಾ' ಎಂದೇ ಕರೆಯುತ್ತಿತ್ತು. "ಇಷ್ಟು ದಿನಗಳಾದರೂ

ನನ್ನನ್ನು ಇನ್ನೂ 'ಅಮ್ಮಾ' ಎಂದು ಕರೆಯುತ್ತೀಯಾ 'ಮಮ್ಮಿ' ಎಂದು ಕರೆಯಲು ಬರುವುದಿಲ್ಲವಾ ನಿನಗೆ" ಎಂದು ಬೆಂಗಳೂರಿನ ಆ 'ಮಹಾತಾಯಿ' ಸಿಟ್ಟಿಗೆದ್ದು ಮಗುವಿನ ಮುಖದ ಮೇಲೆ ಬಾಸುಂಡೆ ಮೂಡುವಂತೆ ಹೊಡೆದಳಂತೆ! 'ಮಮ್ಮಿ' ಎಂಬ ಶಬ್ದಕ್ಕೆ ಇಂಗ್ಲೀಷ್ ಶಬ್ದಕೋಶದಲ್ಲಿ 'ಸತ್ತ ಹೆಣ' ಎಂಬ ಅರ್ಥವೂ ಇದೆ. ಉದಾಹರಣೆಗೆ ಈಜಿಪ್ಟಿನ ಪಿರಮಿಡ್‌ಗಳಲ್ಲಿರುವ 'ಮಮ್ಮಿ'ಗಳು. ಹೀಗಿದ್ದರೂ ನಮ್ಮ ತಾಯಂದಿರಿಗೆ ಮಕ್ಕಳಿಂದ 'ಮಮ್ಮಿ' ಎನಿಸಿಕೊಳ್ಳುವ ಹುಚ್ಚು ಏಕೋ ಏನೋ!

ಒಂದೆಡೆ ಕನ್ನಡನಾಡಿನೊಳಗೆ ಪ್ರಾರಂಭಿಕ ಹಂತದಿಂದ ಕನ್ನಡದ ಮೇಲೆ ಧಾಳಿ. ಮತ್ತೊಂದೆಡೆ ಕನ್ನಡನಾಡಿನ ಹೊರಗಿರುವ ಕನ್ನಡ ಅಧ್ಯಯನ ಪೀಠಗಳು ಮುಚ್ಚುವ ಭಯ. ಇಂದು ಕನ್ನಡನಾಡಿನ ಹೊರಗಡೆ ಕನ್ನಡದ ಕೆಲಸ ಏನಾದರೂ ಆಗಿದ್ದರೆ ಅದು ಹೊರನಾಡ ಕನ್ನಡಿಗರಿಗೆ ತಮ್ಮ ನಾಡು ನುಡಿ ಸಂಸ್ಕೃತಿಯ ಬಗ್ಗೆ ಇರುವ ಅಭಿಮಾನದಿಂದ. ಅದರಲ್ಲಿ ಕರ್ನಾಟಕ ಸರ್ಕಾರದ ಪಾತ್ರ ನಗಣ್ಯ. ಸುಮಾರು 35 ವರ್ಷಗಳ ಹಿಂದೆ ತಮಿಳುನಾಡಿನ ಮದುರೈ ಕಾಮರಾಜ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭವಾಯಿತು. ಅದರ ಪ್ರಾಧ್ಯಾಪಕ ಹುದ್ದೆಗೆ ವೇತನಾನುದಾನವನ್ನು ಕರ್ನಾಟಕ ಸರ್ಕಾರದಿಂದ ಮುಂಜೂರು ಮಾಡಿದ ಆಗಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಮಿಳುನಾಡಿನಲ್ಲಿ ಕನ್ನಡ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ್ದರು. ನಂತರ ಯು.ಜಿ.ಸಿ ಇನ್ನೆರಡು ಅಧ್ಯಾಪಕರ ಹುದ್ದೆಗಳನ್ನು ಮುಂಜೂರು ಮಾಡಿದ್ದು ಆ ಹುದ್ದೆಗಳು ಈಗ ಖಾಲಿ ಇವೆ. ಅಲ್ಲದೆ ಖಾಯಂ ಆಗಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸಮಾಡುತ್ತಿರುವ ಡಾ. ಹರಿಕೃಷ್ಣ ಭರಣ್ಯರವರು ಸದ್ಯದರಲ್ಲಿಯೇ ನಿವೃತ್ತರಾಗಲಿದ್ದಾರೆ. ಅವರ ನಿವೃತ್ತಿಯೊಂದಿಗೆ ಈ ಕನ್ನಡ ವಿಭಾಗ ಮುಚ್ಚಿಹೋಗಲಿದೆ. ಹಾಗಾಗದಂತೆ ವ್ಯವಸ್ಥೆ ಮಾಡಲು ಡಾ. ಭರಣ್ಯರವರು ಅತ್ಯಂತ ಕಾಳಜಿಯಿಂದ ಪತ್ರ ಬರೆದರೆ ಮುಖ್ಯಮಂತ್ರಿಗಳ ಉಪಕಾರ್ಯದರ್ಶಿಗಳು ಕನ್ನಡ ಸಂಸ್ಕೃತಿ ಇಲಾಖೆಗೆ, ಕನ್ನಡ ಸಂಸ್ಕೃತಿ ಇಲಾಖೆಯು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಕೈತೊಳೆದುಕೊಂಡಿದ್ದಾರೆ. ಮಠಗಳಿಗೆ ಧಾರಾಳವಾಗಿ ಧನಸಹಾಯ ಮಾಡುತ್ತಾರೆಂದು ಅಪವಾದವನ್ನು ಹೊತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಇತ್ತ ಕಣ್ಣುಹಾಯಿಸಿ ಮದುರೈವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠ ಮುಚ್ಚಿಹೋಗದಂತೆ ಕ್ರಮ ಕೈಗೊಂಡು ಪುಣ್ಯ ಕಟ್ಟಿಕೊಳ್ಳುವುದು ಒಳ್ಳೆಯದು.

'ಕನ್ನಡಯೆನೆ ಕುಣಿದಾಡುವುದೆನ್ನೆದೆ, ಕನ್ನಡಯೆನೆ ಕಿವಿ ನಿಮಿರುವುದು' ಎಂಬ ಕವಿವಾಣಿಯ ಭಾವ-ತೀವ್ರತೆಯು ಅನುಭವಕ್ಕೆ ಬರುವುದು ಕನ್ನಡ ನಾಡಿಗಿಂತ ಕನ್ನಡದ ಗಡಿಬಾಂದುಗಳನ್ನು ದಾಟಿ ಅನ್ಯಭಾಷೆಯ ಪ್ರದೇಶಗಳಲ್ಲಿದ್ದಾಗ. ಪರದೇಶಗಳಲ್ಲಿ ಸಂಚರಿಸುವಾಗ ಆಕಸ್ಮಿಕವಾಗಿ ದೂರದಲ್ಲಿ ಯಾರೋ ಕನ್ನಡದಲ್ಲಿ ಮಾತನಾಡುವುದು ಕೇಳಿಬಂದರೆ ಹೃದಯದಲ್ಲಿ ಆವಿರ್ಭವಿಸುವ ಭಾವನೆಗಳ ಮಿಡಿತ, ಅವರು ಯಾರಿರಬಹುದು ಹತ್ತಿರ ಹೋಗಿ ಮಾತನಾಡಿಸಬೇಕೆಂಬ ಮನಸ್ಸಿನ ತುಡಿತ ಹೇಳಲಸದಳ. 1994 ರಲ್ಲಿ ಪ್ರಥಮಬಾರಿಗೆ ನಾವು ಏರ್ಪಡಿಸಿದ್ದ 'ವಿಶ್ವಶಾಂತಿ ಯಾತ್ರೆ'ಯ ಸಂದರ್ಭದಲ್ಲಿ ಸ್ವಿಟ್ಜರ್‌ಲೆಂಡ್‌ನ ಪ್ರಮುಖ ನಗರವಾದ ಜಿನೀವಾದಲ್ಲಿ ಆಕಾಶದೆತ್ತರಕ್ಕೆ ಚಿಮ್ಮುವ ಕಾರಂಜಿಯನ್ನು ನೋಡುತ್ತಾ ಸಮೀಪದ ಉದ್ಯಾನವನದಲ್ಲಿ ಕುಳಿತಿದ್ದೆವು. ಸಂಜೆಯ ಹೊತ್ತು. ಹತ್ತಿರದ ಇಂಡಿಯನ್ ರೆಸ್ಟೋರೆಂಟ್‌ನಲ್ಲಿ ಊಟಕ್ಕೆ ಹೋಗಿದ್ದ ನಮ್ಮ ಪ್ರವಾಸಿಗರು ಇನ್ನೂ ಮರಳಿ ಬಂದಿರಲಿಲ್ಲ. ಬೇಗನೆ ಊಟ ಮುಗಿಸಿಕೊಂಡು ಬಂದ ನಮ್ಮ ಪ್ರವಾಸೀತಂಡದ ಕೆಲವು ಮಹಿಳೆಯರು ಉದ್ಯಾನವನದ ಇನ್ನೊಂದು ಬದಿಯಲ್ಲಿ ಕುಳಿತು ಮಾತನಾಡುತ್ತಿದ್ದರು. ಅದೇ ದಾರಿಯಲ್ಲಿ ಬಂದ ಅಪರಿಚಿತ ಯುವ ಮಹಿಳೆಯೊಬ್ಬಳು, ಕನ್ನಡದಲ್ಲಿ ನಮ್ಮ ಮಹಿಳೆಯರು ಹರಟೆ ಹೊಡೆಯುತ್ತಿದ್ದುದನ್ನು ಕೇಳಿಸಿಕೊಂಡು ಆಕರ್ಷಿತಳಾಗಿ ಅವರ ಹತ್ತಿರ ಹೋದಳು. 'ವಿಶ್ವಶಾಂತಿ ಯಾತ್ರೆ'ಯ ಯಾತ್ರಿಕರಾಗಿ ನೂರೊಂದು ಜನ ಕರ್ನಾಟಕದ ಗ್ರಾಮೀಣ ಪ್ರದೇಶದಿಂದ ಬಂದಿರುವ ವಿಷಯವನ್ನು ತಿಳಿದುಕೊಂಡಳು. ಪ್ರವಾಸವನ್ನು ಏರ್ಪಡಿಸಿದ ನಾವು ಸಿರಿಗೆರೆಯ ಗುರುಗಳೆಂದು ತಿಳಿದು ನಮ್ಮ ಹತ್ತಿರ ಓಡಿ ಬಂದಳು. ಕಾಲುಮುಟ್ಟಿ ನಮಸ್ಕರಿಸಿ ತನ್ನ ಪರಿಚಯವನ್ನು ಮಾಡಿಕೊಂಡು 'ನಮ್ಮ ತಂದೆಯವರ ಪರಿಚಯ ತಮಗಿರಬೇಕಲ್ಲವೇ?' ಎಂದು ಕೇಳಿದಳು. ಆ ಅಪರಿಚಿತ ಯುವ ಮಹಿಳೆ ಮತ್ತಾರೂ ಅಲ್ಲದೆ ಕನ್ನಡದ ಖ್ಯಾತ ಸಾಹಿತಿ ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಎಲ್. ಬಸವರಾಜುರವರ ಮಗಳು ಶ್ರೀಮತಿ ನಳಿನಿ. 'ನಿಮ್ಮ ತಂದೆ ನಮ್ಮ ಗುರುವರ್ಯರ ಕಾಲದಿಂದಲೂ ನಮಗೆ ಚೆನ್ನಾಗಿ ಗೊತ್ತಮ್ಮಾ...' ಎಂದು ನಾವು ಹೇಳುತ್ತಿದ್ದಂತೆಯೇ ಆ ಮಹಿಳೆಯ ಕಣ್ಣುಗಳು ತೇವಗೊಂಡು ತನ್ನ ತವರಿನವರನ್ನು ಕಂಡ ಧನ್ಯತೆಯ ಭಾವ ಮುಖದಲ್ಲಿ ಎದ್ದು ಕಾಣುತ್ತಿತ್ತು! ವಿದೇಶೀ ನೆಲದಲ್ಲಿ ಅಪರೂಪಕ್ಕೆ ಕನ್ನಡದಲ್ಲಿ ಮಾತನಾಡುವ ಮಹಿಳಾತಂಡವೇ ಸಿಕ್ಕಿದ್ದರಿಂದ ಆ ಮಹಿಳೆಗೆ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಆಕೆಯ ಹೃದಯಾಂತರಾಳದಿಂದ ಚಿಮ್ಮುತ್ತಿದ್ದ ಮಧುರ ಭಾವನೆಗಳನ್ನು ಗುರುತಿಸಿದ ನಮ್ಮ ಪ್ರವಾಸಿಗರಿಗೆ ಆ ಉದ್ಯಾನವನದಲ್ಲಿ ಬಾನೆತ್ತರಕ್ಕೆ ಚಿಮ್ಮುತ್ತಿದ್ದ ನಿರ್ಜೀವಿ ಕಾರಂಜಿಗಿಂತ ಹೆಚ್ಚು

ಆಕರ್ಷಕವಾದ ಜೀವಂತ ಕಾರಂಜಿಯಾಗಿ ಅವಳು ಕಂಡಳು. ಆ ದೇಶದಲ್ಲಿ ಹತ್ತಾರು ವರ್ಷಗಳಿಂದ ನೆಲೆಸಿ ಬಂಧು-ಬಾಂಧವರಿಂದ ದೂರವಿದ್ದು ನೊಂದಿದ್ದ ಆ ಮಹಿಳೆಯ ಮನಃಸ್ಥಿತಿ ಮಹಾಕವಿ ಕಾಳಿದಾಸನು 'ಕುಮಾರಸಂಭವ'ದಲ್ಲಿ ಚಿತ್ರಿಸಿದ ಪಾರ್ವತಿಯ ಮನಃಸ್ಥಿತಿಯನ್ನು ಹೋಲುತ್ತಿತ್ತು: "ಶೈಲಾಧಿರಾಜತನಯಾ ನ ಯಯೌ ನ ತಸ್ಥೌ!" ಕಾಳಿದಾಸನು ವರ್ಣಿಸುವಂತೆ ಹಿಮಾಲಯದ ತಪ್ಪಲಲ್ಲಿ ಧ್ಯಾನಕ್ಕೆ ಕುಳಿತಿದ್ದ ಜಟಾಧಾರಿ ಶಿವನನ್ನು ನೋಡಿ ಆಕರ್ಷಿತಳಾದ ಪಾರ್ವತಿಯ ಹಾಗೆ ಆ ಯುವ ಮಹಿಳೆ 'ನ ಯಯೌ ನ ತಸ್ಥೌ' ಅಂದರೆ ಮುಂದೆ ಅಡಿಯಿಡಲೂ ಆಗದ, ಅಲ್ಲಿಯೇ ನಿಲ್ಲಲೂ ಆಗದ ಮಾನಸಿಕ ತೊಳಲಾಟದಲ್ಲಿದ್ದಳು!

4.2.2009

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑